**1ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ**

**ಸಿ.ಸಿ ಸಂಖ್ಯೆಃ 1430/2025**

**ಸಿ.ಡಬ್ಲ್ಯೂ -2, ಪಿ.ಡಬ್ಲ್ಯೂ -2**

| | | |
|---|---|---|
| ಸಾಕ್ಷಿದಾರರ ಹೆಸರು | : | ಲಕ್ಷ್ಮಮ್ಮ |
| ಗಂಡನ ಹೆಸರು | : | ಭರಮಪ್ಪ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ಕಣಸೆ ಗ್ರಾಮ, ಸಾಗರ ತಾಲ್ಲೂಕು. |

**ಪ್ರಮಾಣೀಕರಿಸಿದ ದಿನಾಂಕ : 28.07.2026.**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1. ಚಾಸ 1 ನನ್ನ ಮಗ. ಚಾಸ 3 ರಿಂದ 6 ರವರ ಪರಿಚಯವಿದೆ. ಆರೋಪಿತರ ಪರಿಚಯವಿದೆ. ಆರೋಪಿತರು ಮತ್ತು ನಮ್ಮ ನಡುವೆ ಯಾವುದೇ ಜಗಳವಾಗಿರುವುದಿಲ್ಲ. ಆರೋಪಿತರು ನಮಗೆ ಹೊಡಿ ಬಡಿ ಮಾಡಿ, ಅವಾಚ್ಯ ಶಬ್ದಗಳಿಂದ ನಿಂದಿಸಿ ಜೀವ ಬೆದರಿಕೆ ಹಾಕಿರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆಯ ಕಲಂ 180 ರ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲುಃ- ಸ.ಸ.ಅ. ರವರಿಂದಃ-

1. ದಿಃ09.09.2025 ರಂದು ರಾತ್ರಿ 9 ಗಂಟೆಯ ಸಮಯದಲ್ಲಿ ನಾನು ಮತ್ತು ಚಾಸ 1 ಬೈಕಿನಲ್ಲಿ ಬರುತ್ತಿದ್ದಾಗ ಆರೋಪಿತರು ಜಮೀನಿನ ಬೇಲಿ ಮಾಡಿದ ವಿಚಾರಕ್ಕೆ ನನ್ನನ್ನು ಮತ್ತು ಚಾಸ 1 ರವರನ್ನು ಅಡ್ಡಗಟ್ಟಿರುತ್ತಾರೆ ಎಂದರೆ ಸರಿಯಲ್ಲ. 1ನೇ ಆರೋಪಿ ಬೈಕಿಗೆ ಒದ್ದು ನನ್ನನ್ನು ಮತ್ತು ಚಾಸ 1 ರವರನ್ನು ಕೆಳಗೆ ಬೀಳಿಸಿರುತ್ತಾನೆ ಎಂದರೆ ಸರಿಯಲ್ಲ. 1ನೇ ಆರೋಪಿ, 2ನೇ ಆರೋಪಿಯ ಕೈಯಲ್ಲಿದ್ದ ರಾಡನ್ನು ತೆಗೆದುಕೊಂಡು ಚಾಸ 1 ರವರ ಬಲಮುಂಗೈಗೆ ಹೊಡೆದ ಎಂದರೆ ಸರಿಯಲ್ಲ. 2ನೇ ಆರೋಪಿ ತನ್ನ ಕೈಯಲ್ಲಿದ್ದ ಕತ್ತಿಯನ್ನು ಹಿಂಭಾಗ ಮಾಡಿ ಚಾಸ 1 ರವರ ಎಡ ತಲೆಗೆ ಹೊಡೆದ ಎಂದರೆ ಸರಿಯಲ್ಲ. 3ನೇ ಆರೋಪಿ ಕೋಲಿನಿಂದ ಚಾಸ 1 ರವರ ಮೈಕೈಗೆ ಹೊಡೆದ ಎಂದರೆ ಸರಿಯಲ್ಲ.

5 ನೇ ಆರೋಪಿ ಕೈಯಿಂದ ಚಾಸ 1 ರವರ ಕೆನ್ನೆಗೆ ಹೊಡೆದು ನಂತರ ನನಗೆ ಕಾಲಿನಿಂದ ಸೊಂಟಕ್ಕೆ ಒದ್ದ ಎಂದರೆ ಸರಿಯಲ್ಲ. ಆರೋಪಿತರು ಅವಾಚ್ಯವಾಗಿ ನಿಂದಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾನು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿಯು ಪೊಲೀಸರ ಮುಂದೆ ನೀಡಿದ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿದ್ದರಿಂದ ಹೇಳಿಕೆಯನ್ನು ನಿಪಿ 3 ಎಂದು ಗುರುತಿಸಲಾಯಿತು. ಆರೋಪಿತರೊಂದಿಗೆ ರಾಜಿ ಆಗಿದ್ದೇನೆ ಎಂದರೆ ಸರಿ. ರಾಜಿ ಆಗಿರುವ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**

**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.